ಆಗುತ್ತಿರಲಿಲ್ಲ. ನಿಮ್ಮ ಆಟಿಟ್ಯೂಡ್ ನಾನು ಹೇಳುತ್ತಿದ್ದೇನೆ. ಆದ್ದರಿಂದ ಈಗ ನೀರು ಘೋಷಣೆ ಮಾಡಬೇಕು. ನಾವು ಶುಕ್ರವಾರ ದೆಹಲಿಗೆ ಹೋಗುತ್ತಿದ್ದೇವೆ, ನೀವೇನು ಮಾಡಿದ್ದೀರಿ ಎಂದು ಕೇಂದ್ರ ಸರ್ಕಾರದವರು ಕೇಳುತ್ತಾರೆ. ಅದಕ್ಕೆ ನೀವು ಏನು ಹೇಳುತ್ತೀರಿ ಉತ್ತರ? ಇವತ್ತೇನು ಬೇರೆ ಬೆಳೆಗಳಲ್ಲಿ ಮಾರ್ಕೆಟ್ ಇಂಟರ್‌ವೆನ್‌ಷನ್ ಮಾಡಿದ್ದೀರಿ, ಕೇಂದ್ರ ಸರ್ಕಾರ ಆ ಹಣವನ್ನು ರಿ-ಇಂಬರ್ಸ್ ಮಾಡುತ್ತಾರೆ, ಆ ಹಣವನ್ನು ನೀವೇನು ಕೊಡತಕ್ಕಂಥದಲ್ಲ. ಟೆಂಪರರಿಯಾಗಿ ನೀವು ಆಡ್ವಾನ್ಸ್ ಮಾಡುತ್ತೀರಿ ಅಷ್ಟೆ. ಅದೇ ರೀತಿ ರೇಷ್ಮೆ ಬೆಳೆಗಾರರಿಗೂ ಯಾಕೆ ಕೊಡಬಾರದು? ಆದ್ದರಿಂದ ಈ ಸರ್ಕಾರ ರೇಷ್ಮೆ ಬೆಳೆಗಾರರ ಪರವಾಗಿಲ್ಲವೆಂದು ಅತ್ಯಂತ ನೋವಿನಿಂದ ನಾನು ಹೇಳುತ್ತಿದ್ದೇನೆ. You have failed to protect. ಇಲ್ಲದೇ ಹೋದರೆ ನೀವು ಇಂಟರ್‌ವೀನ್ ಆಗಬೇಕಾಗಿತ್ತು. ಇದನ್ನು ಪ್ರತಿಭಟಿಸಿ ನಾವು ಹೊರಗಡೆ ಹೋಗುತ್ತಿದ್ದೇವೆ.

(ಜನತಾದಳ-(ಯು) ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಚ್.ಎಂ. ರೇವಣ್ಣ:- ಬಾವಿಗೆ ಬಿದ್ದದ್ದಾಯಿತು, ಈಗ ಸಭಾತ್ಯಾಗ - ಇದು ರಾಜಕೀಯವಲ್ಲವೆ? ಕೇಂದ್ರದಲ್ಲಿ ನಿಮ್ಮ ನಾಯಕ ಮಾನ್ಯ ರಾಮಕೃಷ್ಣ ಹೆಗಡೆ ಇದರಲ್ಲಿ ಅವರೇನು ಮಾಡಿದರು ಎಂಬುದು ಗೊತ್ತಿಲ್ಲವೆ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಖಾತೆ ಸಚಿವರು):- ಇವತ್ತು ಕಷ್ಟದಲ್ಲಿ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ದುರುದ್ದೇಶ ಇವರದ್ದು ಇದೆಯೇ ಹೊರತು ರೈತರ ರಕ್ಷಣೆ ಮಾಡಬೇಕೆಂಬ ಆಸಕ್ತಿ, ಕಾಳಜಿ ಇವರಿಗೆ ಖಂಡಿತ ಇಲ್ಲ.

ಶ್ರೀ ವೈ.ಕೆ. ರಾಮಯ್ಯ:- ಮಾನ್ಯ ಅಧ್ಯಕ್ಷರೆ, ಮಾರ್ಕೆಟ್ ಇಂಟರ್‌ವೆನ್‌ಶನ್ ಮಾಡಬೇಕು. ಬೆಂಬಲ ಬೆಲೆ ಕೊಡಬೇಕೆಂಬ ನನ್ನ ಸ್ನೇಹಿತರ ವಾದವನ್ನು ನಾನು ಒಪ್ಪುತ್ತಾ ಒಂದು ಮಾತನ್ನು ಅವರಿಗೆ ಕೇಳಲಿಕ್ಕೆ ಇಷ್ಟಪಡುತ್ತೇನೆ. ಅವರು ಎಲ್ಲಾ ಹೊರಟು ಹೋಗಿ ಬಿಟ್ಟರು. ನಾವು ಇಲ್ಲಿ ಬೆಂಬಲ ಬೆಲೆ ಕೊಟ್ಟು ಕೊಂಡುಕೊಳ್ಳುವುದು, ಇವರು ಅಲ್ಲಿ ಹೊರದೇಶದಿಂದ ಸಲೀಸಾಗಿ ತರಿಸುತ್ತಿರುವುದು. ಇವೆರಡೂ ಸಾಧ್ಯವಿಲ್ಲವೇ ಇರುವ ಕೆಲಸ. ಕೇಂದ್ರ ಸರ್ಕಾರ ಸಂಪೂರ್ಣವಾಗಿ ಕಳ್ಳಸಾಗಾಣಿಕೆ ಮತ್ತು ಆಮದು ಈ ಎರಡನ್ನೂ ತಡೆಯುವಂತಹ ಜವಾಬ್ದಾರಿಯನ್ನು ತೆಗೆದುಕೊಳ್ಳಲಿ. ಆಮೇಲೆ ಬೆಲೆ ಕಡಿಮೆಯಾದರೆ ರಾಜ್ಯ ಸರ್ಕಾರ ಅದನ್ನು ನಿಭಾಯಿಸುತ್ತದೆ.

ಶ್ರೀ ಎ. ನಾಗರಾಜು (ಮಾಲೂರು):- ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದವರು ಪ್ರತಿಭಟನೆ ಮಾಡಿ ಆಚೆ ಹೋಗಿದ್ದಾರೆ. ಆದ್ದರಿಂದ, ಸರ್ವ ಪಕ್ಷಗಳ ನಿಯೋಗ ತೆಗೆದುಕೊಂಡು ಹೋಗುವ ಪ್ರಶ್ನೆ ಉದ್ಭವಿಸುತ್ತದಾ? ಸರ್ವ ಪಕ್ಷಗಳ ನಿಯೋಗವನ್ನು ನಾವು ಏತಕ್ಕೆ ತೆಗೆದುಕೊಂಡು ಹೋಗಬೇಕು.?

Sri D.B. Chandregowda:- He is very much right.

ಅಧ್ಯಕ್ಷರು:- ಅದನ್ನು ನಾನು ಹೇಳಲು ಆಗುವುದಿಲ್ಲ. ಮಾನ್ಯ ಮಂತ್ರಿಗಳು, ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕು. ಇದು ಬಹಳ ಮುಖ್ಯವಾದ ವಿಚಾರವೆಂದು ನಾವು ಅಧ್ಯಕ್ಷರ ಕೋಣೆಗೆ ಹೋಗಿ ಎಲ್ಲಾ ತೀರ್ಮಾನ ಮಾಡಿಕೊಂಡು, ಸರ್ಕಾರ ಕೂಡ ಅನೇಕ ವಿಷಯಗಳನ್ನು